

## 'ಸುಧಾ' ಬಚ್ಚಿಟ್ಟು ಓದುತ್ತಿದ್ದೆ

ಮೂವತ್ತು ಮನೆಗಳಿದ್ದ ಪುಟ್ಟ ಹಳ್ಳಿ ನಮ್ಮೂರು. ನಮ್ಮ ಮಾವನ ಮಗ ಆಗಿನ ಕಾಲದಲ್ಲಿ ಬಿ.ಎ. ಮಾಡಿ ಜಮೀನು ನೋಡಿಕೊಂಡು ಊರಲ್ಲೇ ಇದ್ದರು. ಅವರು 'ಸುಧಾ', 'ಪ್ರಜಾಮತ' ಮತ್ತಿತರ ಪತ್ರಿಕೆ ತರಿಸುತ್ತಿದ್ದರು. ನನಗೆ ಕಥೆ ಓದುವ ಹುಚ್ಚು. ನನ್ನ ಗಂಡನಿಗೆ ಹೆಣ್ಮಕ್ಕಳು ಓದಿದರೆ ಹಾಳಾಗುತ್ತಾರೆ ಎಂಬ ಭಾವನೆ. 'ಸುಧಾ' ಧಾರಾವಾಹಿಗಳನ್ನು ಗಂಡನಿಗೆ ಕಾಣದ ಹಾಗೆ ಸೌದೆ ಮೂಲೆಯಲ್ಲಿ ಬಚ್ಚಿಟ್ಟು ಅಡಿಗೆ ಮಾಡುವಾಗ ಓದುತ್ತಿದ್ದೆ. ಮೊದಲ 'ಸುಧಾ' ಓದಿದ ಹೆಮ್ಮೆ ನನಗಿದೆ. ಅಲ್ಲಿಂದ ಬೇರೆ ಊರಿಗೆ ಬಂದೆವು. ಆಗ ಈಗಿನಂತೆ ಹೆಂಗಸರ ಹತ್ತಿರ ದುಡ್ಡಿರುತ್ತಿರಲಿಲ್ಲ. ನಾವು ಎಂಟು ಜನ ಗೆಳತಿಯರು ಸೇರಿ ಒಂದೊಂದು ವಾರ ಒಬ್ಬೊಬ್ಬರು ದುಡ್ಡು ಕೊಟ್ಟು 'ಸುಧಾ' ತರಿಸುವುದು– ಅದನ್ನು ಎಲ್ಲ ಎಂಟು ಜನರು ಓದುವುದು ಮಾಡುತ್ತಿದ್ದೆವು. ನನ್ನ ಮಕ್ಕಳಿಗೆ ಕೆಲಸ ಸಿಕ್ಕಿದ ಮೇಲೆ ಮೈಸೂರಿಗೆ ಬಂದೆವು. ಆಗ ನನ್ನ ಮಗನೇ 'ಸುಧಾ' ತರಿಸಲು ಶುರು ಮಾಡಿದ.

ಧಾರಾವಾಹಿಗಳನ್ನು ಒಂದೂ ಬಿಡದೆ ಸತತವಾಗಿ ಎಂಟು ವರುಷ ಓದಿದೆ. ಅವನ್ನೆಲ್ಲ ಪುಸ್ತಕ ರೂಪದಲ್ಲಿ ಸಂಗ್ರಹಿಸಿ ಗೆಳತಿಯರಿಗೆ ಕೊಡುತ್ತಿದ್ದೆ.

–ಹೀಗೇ... ನೆನಪಿನ ಸುರುಳಿಗಳು ಬಿಚ್ಚಿಕೊಳ್ಳುತ್ತವೆ.

–ಆರ್. ಮಣಿ ಹಾಡ್ಯ, ಮೈಸೂರು

## ಕನ್ನಡಿಗರು ಜೀವಂತ

ಸುವರ್ಣ ಸಂಭ್ರಮದ ಸಂಚಿಕೆ ಮುಖಪುಟ (ಐಟಿ ಕಣಿವೆಯಲ್ಲಿ ಕನ್ನಡ ಕಲರವ) ಕಂಡೊಡನೆ ಕನ್ನಡಿಗರು ಸತ್ತಿಲ್ಲ, ಜೀವಂತ ಇದ್ದಾರೆ ಎಂದು ಆನಂದಪಟ್ಟೆ. ಇಂಗ್ಲಿಷ್ ಭಾಷೆಯನ್ನು ಬಾಗಿಲ ಹೊರಗೆ ಬಿಡಬೇಕಾದ ಪಾದರಕ್ಷೆಗಳಂತೆ ತಿಳಿದು ನಡೆಯಬೇಕಾಗಿದೆ.

–ಬಿ.ಎನ್. ಸೊಲ್ಲಾಪುರೆ ಕಮಲನಗರ, ಬೀದರ ಜಿಲ್ಲೆ

## ಕಪ್ಪು ಬಿಳುಪು ಚಿತ್ರ ಮರೆತಿಲ್ಲ

'ಸುಧಾ' 50ರಲ್ಲಿ ಕಾಲಿಟ್ಟಿದ್ದರೂ, ಮೊದಲ ಸಂಚಿಕೆಯ ಮೊದಲ ಒಳಪುಟದಲ್ಲಿ ರಾಜ್‌ಕುಮಾರ್, ಹಿಂಬದಿಯ ಒಳಪುಟದಲ್ಲಿ ಬಿ.ಎಸ್. ಚಂದ್ರಶೇಖರ್ ಕಪ್ಪು ಬಿಳುಪು ಚಿತ್ರ ಪ್ರಕಟವಾಗಿತ್ತು. ಸ್ಮೃತಿಯಿಂದ ಅದಿನ್ನೂ ಅಳಿಸಿಲ್ಲ.

ಈಗಿನ ಸಂಚಿಕೆಗಳಲ್ಲಿ ಒಂದು ಪುಟವನ್ನಾದರೂ 50 ವರ್ಷದ ಹಿಂದಿನ ನೆನಪಿಗೆ ಮೀಸಲಿಡಬಹುದೇ? ಪ್ರಯತ್ನಿಸಿ. ಭ್ರಮರ, ವಿಚಾರ ರಶ್ಮಿ, ಬೀಚಿಯವರ ಉತ್ತರಗಳು, ಉತ್ತಮ ಲೇಖನದ ತುಣುಕು ಹೀಗೆ...

–ಕೆ.ಸಿ. ಪುಟ್ಟಸ್ವಾಮಿ ಗೌಡ, ಮಳವಳ್ಳಿ

## ಡಬ್ಬಿಂಗ್ ವಿಶ್ಲೇಷಣೆ




'ಸುಧಾ' ಫೆ.13ರ ಮುಖಪುಟ ಲೇಖನ ಬಿ.ಎಂ.ಹನೀಫ್‌ರ 'ಡಬ್ಬಿಂಗ್ ಪಾಲಿಟಿಕ್ಸ್' ಕನ್ನಡದಲ್ಲಿ ಡಬ್ಬಿಂಗ್ ಪರ– ವಿರೋಧದ ವಿವರವಾದ ವಿಶ್ಲೇಷಣೆ ಮಾಡಿದೆ.

– ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಎಚ್.ಆನಂದಕುಮಾರ್, ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ/ ಕೆ.ಎಂ.ಮಧ್ವರಾಯ, ಬೆಂಗಳೂರು

## ತುಟಿ ಚಲನೆಗೆ ಡಬ್ಬಿಂಗ್! ಆಭಾಸ

ಇತ್ತೀಚಿನ ವರ್ಷಗಳಲ್ಲಿ ಯಾವುದೇ ಭಾಷೆಯಲ್ಲೂ ಒಳ್ಳೆಯ ಚಿತ್ರಗಳು ಬರುವುದು ಅಪರೂಪ. ಮುಖ್ಯವಾಗಿ ತುಟಿ ಚಲನೆಯನ್ನು ಹೊಂದಿಸಿ 'ಡಬ್ಬಿಂಗ್' ಮಾಡುವುದು ಆಭಾಸಗಳಿಗೆ ಕಾರಣವಾಗುತ್ತದೆ. ಈ ಹಿಂದೆ ಬಂದ 'ಮಾಯಾ ಬಜಾರ್' ಹಾಗೂ 'ಲವ–ಕುಶ' ಚಿತ್ರಗಳು ತೆಲುಗಿನಲ್ಲಿ ಕೊಟ್ಟ ಸಂತೋಷವನ್ನು ಕನ್ನಡ ಭಾಷೆಯಲ್ಲಿ ಕೊಡಲಾಗಲಿಲ್ಲ.

–ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

## ಓದಲು ಮಾರ್ಗದರ್ಶನ

'ಡಾ. ಮಾರ್ಕಂಡೇಯ' ಅವರ 'ಪರೀಕ್ಷೆ ಮತ್ತು ನೆನಪಿನ ಶಕ್ತಿ' ಓದುವಿಕೆಯ ಅರಿವು ಮೂಡಿಸಿತು.

–ಮರಿಸ್ಸಾ ಪಾವ್ಲ ಗೊನ್ಸಾಲ್ವಿಸ್, ಹೊನ್ನಾವರ/ ಶೋಭಾ ಅರವಿಂದ್, ಶಿವಮೊಗ್ಗ

## ದೊಡ್ಡವರ ಸಣ್ಣತನ

ಕೆ.ಶ್ರೀನಿವಾಸರಾವ್‌ರ ಮಿನಿಕಥೆ 'ಭಾರೀ ಗಿರಾಕಿ' ದೊಡ್ಡವರ ಸಣ್ಣತನವನ್ನು ಮಾರ್ಮಿಕವಾಗಿ ಚಿತ್ರಿಸಿದೆ.

–ಸುಂದರ್, ಬೆಂಗಳೂರು/ ಮಹೇಶ್ ಸಣ್ಣಗಿರಿ, ಕೊಟ್ಟೂರು

## ಖುಷಿ ನೀಡಿದ ಹಾಸ್ಯಬರಹ

ಯಶವಂತ ವಾಜಂತ್ರಿ 'ಹೆಂಡತಿಗಾಗಿ ಮಾಡಿದ ಚುನಾವಣಾ ಡ್ಯೂಟಿ' ಹಾಸ್ಯಬರಹ ಖುಷಿ ಕೊಟ್ಟಿತು.

–ಪಾಪು ಜೈನ್, ಉಜಿರೆ

## ಹವ್ಯಕ ಅಲ್ಲ, ಬೌದ್ಧ ಕೇಂದ್ರ

ಬಿ.ಸೀತಾರಾಮ ಭಟ್ಟರು 'ಸ್ಮಾರಕಗಳ ಆಗರ ಹೈಗುಂದ'ವನ್ನು ಹವ್ಯಕರ ಆಸ್ತಿಯೆಂದು ಚಿತ್ರಿಸಿದ್ದಾರೆ! ಆದರೆ ಇದೊಂದು ಬೌದ್ಧರ ಕೇಂದ್ರವಾಗಿತ್ತು ಎನ್ನುವುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳು ಸಿಕ್ಕಿವೆ.

–ರವಿ ಮಠದಕೇರಿ, ಹೊನ್ನಾವರ

## ತಪ್ಪಾಗಿದೆ

ಫೆ.20ರ 'ಸುಧಾ' ಸಂಚಿಕೆಯ 'ಕಾಲದ ಮರು ಓದು' ನಾ.ಕಾರಂತ ಪೆರಾಜೆಯವರ ಲೇಖನದಲ್ಲಿ ಪ್ರಧಾನಿ ಇಂದಿರಾ ದಾರುಣ ಹತ್ಯೆ 1ನ.1984 ಎಂದು ತಪ್ಪಾಗಿ ಪ್ರಕಟವಾಗಿದೆ. ಅದು ಅ.31 ಇರಬೇಕು.

'ರಣಜಿ ಹೊಸ ಮನ್ವಂತರ' ಓಂಕಾರಮೂರ್ತಿ ಲೇಖನದಲ್ಲಿ ಕೊನೆಯ ವಾಕ್ಯ ಅರ್ಧಕ್ಕೇ ನಿಂತಿದೆ. ಈ ತಪ್ಪುಗಳಿಗಾಗಿ ವಿಷಾದಿಸುತ್ತೇವೆ. (ಸಂ.)



ಶ್ರೀ ವೈಷ್ಣವಿ ದೇವಿ ಜ್ಯೋತಿಷ್ಯ ಕೇಂದ್ರ, ಕೇರಳ ಕರಾವಳಿಯ ಪ್ರಖ್ಯಾತ ದೈವ ಶಕ್ತಿ ಜ್ಯೋತಿಷ್ಯರು

South Kanaras Famous Astrologer in Mangalore
ಹಸ್ತ ರೇಖೆ, ಹೆಬ್ಬೆಟ್ಟಿನ ಗುರುತು, ಜಾತಕ, ಬಾವಚಿತ್ರ, ಮುಖಲಕ್ಷಣ ನೋಡಿ ನಿಖರವಾಗಿ ನಿಮ್ಮ ಭವಿಷ್ಯವನ್ನು ಹೇಳುತ್ತಾರೆ.
ನಿಮ್ಮ ಸಮಸ್ಯೆಗಳಾದ ಉದ್ಯೋಗ, ವ್ಯಾಪಾರ ಹಾಗೂ ವ್ಯವಹಾರ, ಸಾಲದ ಭಾದೆ, ಶತ್ರುಪೀಡೆ, ವಶೀಕರಣ, ಸತಿಪತಿ ಕಲಹ, ಸಂತಾನ, ಮದುವೆ ವಿಳಂಬ, ರಾಜಕೀಯ, ಎಷ್ಟೇ ಸಂಪತ್ತಿದ್ದರೂ ಮನಶಾಂತಿಯ ಕೊರತೆ, ಮನೆಯಲ್ಲಿ ಅಶಾಂತಿ, ಎಷ್ಟೇ ಪ್ರಯತ್ನ ಪಟ್ಟರೂ ಜೀವನದಲ್ಲಿ ಅಭಿವೃದ್ಧಿ ಮತ್ತು ಏಳಿಗೆ ಆಗದೇ ನೊಂದಿದ್ದರೆ ಇನ್ನು ನಿಮ್ಮ ಜೀವನದ ಯಾವುದೇ ಗುಪ್ತ ಕಠಿಣ ಸಮಸ್ಯೆಗಳು ಏನೇ ಇದ್ದರೂ ಕಟೀಲು ಶ್ರೀ ದುರ್ಗಾಪರಮೇಶ್ವರಿ ಹಾಗೂ ಶ್ರೀ ವೈಷ್ಣೋ ದೇವಿಯ ಅಪಾರ ದೈವಶಕ್ತಿಯಿಂದ ಹಾಗೂ ಪೂಜೆ ಆರಾಧನೆಯಿಂದ ಕೇವಲ ಮೂರೇ ದಿನದಲ್ಲಿ ಶಾಶ್ವತ ಪರಿಹಾರ ಮಾಡುತ್ತಾರೆ. ದೂರದ ಊರಿನವರಿಗೂ ದೂರವಾಣಿ ಮುಖಾಂತರ ಪರಿಹಾರ ತಿಳಿಸಲಾಗುವುದು.
ವಿ.ಸೂ: ಇಲ್ಲಿಯವರೆಗೂ ತಾವು ಎಷ್ಟೋ ಜ್ಯೋತಿಷ್ಯರು ದೈವ ದೇವರಲ್ಲಿ ಕೇಳಿ ನಿಮ್ಮ ಸಮಸ್ಯೆಗಳಿಗೆ ಸರಿಯಾದ ಪರಿಹಾರ ಸಿಗದೆ ನೊಂದಿದ್ದರೆ ಅಂತಹ ಕಠಿಣ ಸಮಸ್ಯೆಗಳಿಗೆ ಅಷ್ಟಮಂಗಲ, ತಾಂಬೂಲ ಪ್ರಶ್ನೆ, ಅರೋಡ ಪ್ರಶ್ನೆ ಹಾಗೂ ರಾಶಿ ಪ್ರಶ್ನೆಯಿಂದ ಸಮಸ್ಯೆಗಳ ಮೂಲವನ್ನು ಶೋಧಿಸಿ ಕೇರಳಿಯ ಹಾಗೂ ದಕ್ಷಿಣ ಕನ್ನಡದ ದೈವಿಕ ಉಪಾಸನಾ ಶಕ್ತಿಯಿಂದ ಕೇವಲ ಮೂರೇ ದಿನದಲ್ಲಿ ಶಾಶ್ವತ ಪರಿಹಾರ ಮಾಡಿ ಕೊಡುತ್ತಾರೆ. ಇವರ ಸಲಹೆ ಹಾಗೂ ಮಾರ್ಗದರ್ಶನದಿಂದ ಅದೆಷ್ಟೋ ಕುಟುಂಬಗಳು ಇಂದಿಗೂ ಕೂಡ ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದಾರೆ.
ಮನೆ ವಿಳಾಸ : ಮಲ್ಲಿಕಾ ಅಪಾರ್ಟ್‌ಮೆಂಟ್, ನಂ011, ಅತ್ತಾವರ ಕಟ್ಟೆ ಹತ್ತಿರ, ಈಜ್ಹಿಡೇ ಮಾರ್ಕೆಟ್ ಎದುರುಗಡೆ, ಅತ್ತಾವರ, ಮಂಗಳೂರು.
9902211104, 0824 - 4271104
ಶ್ರೀ ಲಕ್ಷ್ಮೀ ಗಣಪತಿ ಜ್ಯೋತಿಷ್ಯ ಕೇಂದ್ರ : ಲಕ್ಷ್ಮೀ ಕಾಂಪ್ಲೆಕ್ಸ್, ಕೋರ್ಟ್ ಎದುರುಗಡೆ,
ಹುಬ್ಬಳ್ಳಿ 99808 84499